<u>ದಿನಾಂಕಃ 09-08-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಖ್ಯ ವಿಚಾರಣೆಃ ಎದುರುದಾರರ ಪರ ಶ್ರೀ ಎಸ್ ಆರ್ ವಕೀಲರಿಂದಃ</u>

ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣಪತ್ರವನ್ನು ಸಲ್ಲಿಸಿದ್ದೇನೆ ಅದರಲ್ಲಿ ಹೇಳಿರುವ ಅಂಶಗಳೆಲ್ಲವೂ ಸತ್ಯವಾಗಿರುತ್ತವೆ ಅದಕ್ಕೆ ನಾನೇ ಸಹಿ ಮಾಡಿರುತ್ತೇನೆ ಮತ್ತು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

| | |
|---|---|
| ನಿಆರ್-1 | ಜಮೀನು ಮತ್ತು ಮರಗಳಿಗೆ ನೀಡಿರುವ ಪರಿಹಾರದ ಅಕೌಂಟ್ ಸ್ಟೇಟ್ ಮೆಂಟ್ |
| ನಿಆರ್-2 | ನೋಟೀಸ್ / ಕರಾರುಪತ್ರ ದಿ26-03-16 |
| ನಿಆರ್-3 | ದಿ 06-08-15 ಜಿಲ್ಲಾಧಿಕಾರಿಗಳ ಆದೇಶ |
| ನಿಆರ್-4 | ಸರ್ವೇ ನಂ. 129 /4 ರ ಆರ್ ಟಿ ಸಿ |
| ನಿಆರ್-5 | ದಿ 25-04-16 ರ ಪರಿಹಾರದ ರಸೀದಿ |
| ನಿಆರ್-6 | 2 ಪರಿಹಾರದ ಚೆಕ್ಕುಗಳನ್ನು ಒಟ್ಟಾಗಿ |
| ನಿಆರ್-7 | ಬ್ಯಾಂಕ್ ಸ್ಟೇಟ್ ಮೆಂಟ್ |

ಆದ್ದರಿಂದ ಅರ್ಜಿಯನ್ನು ತಿರಸ್ಕರಿಸಬೇಕೆಂದು ನ್ಯಾಯಾಲಯಕ್ಕೆ ಪ್ರಾರ್ಥಿಸುತ್ತೇನೆ.

<u>ಪಾಟೀ ಸವಾಲು ಅರ್ಜಿದಾರರ ಪರ ಶ್ರೀ ಕೆ ಆರ್ ಎನ್ ವಕೀಲರಿಂದ ಃ-</u>

2014 ರಿಂದ ನಾನು ಕೂಡಗಿ ಸಂಸ್ಥೆಯಲ್ಲಿ ನಿರ್ಮಾಣ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದೇನೆ. ನನ್ನ ಸಾಕ್ಷಿ ಪ್ರಮಾಣಪತ್ರದ ಪ್ಯಾರ2 ರಿಂದ 5 ರಲ್ಲಿ ಹೇಳಿರುವ ವಿಷಯಗಳನ್ನು ಸಾಬೀತುಪಡಿಸಲು ದಾಖಲಾತಿಗಳನ್ನು ಹಾಜರುಪಡಿಸಲು ಯಾವುದೇ ತೊಂದರೆಯಿರುವುದಿಲ್ಲ. ಜಿಲ್ಲಾಧಿಕಾರಿಗಳ ಆದೇಶದ ಪ್ರಕಾರ ನಾವು ಪರಿಹಾರದ ಹಣವನ್ನು ನೀಡಿಲ್ಲ ಅಂದರೆ ಸರಿಯಲ್ಲ . ತಮ್ಮ ಸಾಕ್ಷಿ ಪ್ರಮಾಣಪತ್ರದಲ್ಲಿ ಹೇಳಿರುವಂತೆ ರೂ2,05,075-00 ಪರಿಹಾರ ಹಣವನ್ನು ಪಾವತಿಸಿಲ್ಲ ಅಂದರೆ ಸರಿಯಲ್ಲ. ಪರಿಹಾರದ ಹಣವನ್ನು

ಸಂಪೂರ್ಣವಾಗಿ ಪಾವತಿಸಲಾಗಿದೆ ಅಂದರೆ ಸರಿಯಲ್ಲ .ನಾವು ಅರ್ಜಿದಾರರಿಗೆ ಯಾವುದೇ ನೋಟೀಸ್ ನೀಡಿರುವುದಿಲ್ಲ ಅಂದರೆ ಸರಿಯಲ್ಲ . ನಾವು ಲೈನ್ ಎಳೆಯುವ ಸಮಯದಲ್ಲಿ 40 ಹುಣಸೇ ಮರ, 12 ಹೊಂಗೆ ಮರ,ತುಗಲಿ ಮರ , ಹಾಗೂ 2.21 ಗುಂಟೆ ಯಲ್ಲಿ ಶೇಂಗ ಬೆಳೆ ನಾಶಪಡಿಸಿದ್ದೇವೆ ಅಂದರೆ ಸರಿಯಲ್ಲ . ಲೈನ್ ಗೆ 2.21 ಗುಂಟೆ ಜಮೀನು ಆಕ್ರಮಿಸಿದೆ ಅಂದರೆ ಸರಿಯಲ್ಲ. ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ .

- ಮರುವಿಚಾರಣೆ ಇಲ್ಲ-

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇ ಸ ಇದೆ ಎಂದು ಒಪ್ಪಿದ್ದಾರೆ.

6 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.